ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿ ನಡೆದಿರತಕ್ಕ ವ್ಯವಹಾರದ ಬಗ್ಗೆ ನಮ್ಮ ಆಫೀಸರನ್ನು ಕಳುಹಿಸಿ ಎನ್‌ಕ್ವಯರಿ ಮಾಡಿಸಿದ್ದೇವೆ.

ಶ್ರೀ ದಾಪುಗೌಡ.—ದಾವಣಗೆರೆ ಮೆಡಿಕಲ್ ಕಾಲೇಜ್ ಕೋ ಆಪರೇಟೀವ್ ಸೊಸೈಟಿಯ ಮೇಲೆ ನಿರ್ದಿಷ್ಟವಾದ ದೂರುಗಳು ಅಲ್ಲಿ ನಡೆದಿರುವ ದುರ್‌ವ್ಯವಹಾರದ ಬಗ್ಗೆ ಬಂದಿದ್ದರೂ ಚಾರ್ಜ್‌ಸ್ ಹಾಕಿದ್ದಿರೋ ಇಲ್ಲವೋ ತಿಳಿಯುತ್ತಿಲ್ಲ. ದಯವಿಟ್ಟು ತಿಳಿಸಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ದಾವಣಗೆರೆ ಮೆಡಿಕಲ್ ಕಾಲೇಜ್ ಕೋ ಆಪರೇಟೀವ್ ಸೊಸೈಟಿಯವರ ಮೇಲೆ ನಿರ್ದಿಷ್ಟವಾದ ಆಪಾದನೆಗಳನ್ನು ನಮೂದಿಸಿಲ್ಲದಿರುವುದರಿಂದ ಶೋಕಾಸ್ ನೋಟೀಸ್ ಕೊಟ್ಟಿಲ್ಲ. ಅವರು ಮಾಡಿರತಕ್ಕಂಥ ತಪ್ಪನ್ನು ಒಪ್ಪಿ ತಿದ್ದುಕೊಳ್ಳುವುದಾಗಿ ಅವರು ತಿಳಿಸಿರುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೆ ದಾವಣಗೆರೆ ಮೆಡಿಕಲ್ ಕಾಲೇಜ್ ಸಂಬಂಧದಲ್ಲಿ ಸೊಸೈಟಿಗೆ ಸಂಬಂಧಪಟ್ಟಿದೆ. ಸೊಸೈಟಿಯವರು 5 ರಿಂದ 10 ಸಾವಿರದ ವರೆವಿಗೂ ವಿದ್ಯಾರ್ಥಿಗಳಿಂದ ಸರ್ಕಾರದವರು ನಿಗಧಿ ಮಾಡಿರುವುದಕ್ಕಿಂತಲೂ ಹೆಚ್ಚಿಗೆ ಹಣವನ್ನು ವಸೂಲು ಮಾಡುತ್ತಿರುತ್ತಾರೆ. ಹೀಗೆ ಹಣವನ್ನು ಮ್ಯಾನೇಜ್‌ಮೆಂಟ್ ಕಮಿಟಿಯವರು ವಸೂಲು ಮಾಡುತ್ತಿರುವುದರ ಬಗ್ಗೆಯೂ ಮತ್ತು ವಸೂಲು ಮಾಡಿದ ಹಣಕ್ಕೆ ಲೆಕ್ಕವನ್ನು ಸರಿಯಾಗಿ ತೋರಿಸದೆ ಇರುವುದಕ್ಕೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—13ಕೇಸ್‌ಗಳಲ್ಲಿ 35 ಸಾವಿರದಿಂದ 75 ಸಾವಿರದ ವರೆಗೆ ಹಣವನ್ನು ವಸೂಲು ಮಾಡಿದ್ದಾರೆಂದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಬಂದಮೇಲೆ ಆರೀತಿ ಮಾಡುತ್ತಿರುವುದು ತಪ್ಪು, ಸರ್ಕಾರ ಆಜ್ಞೆಗೆ ವಿರುದ್ಧವಾಗಿ ಹೋಗುತ್ತಾ ಇದ್ದೀರಿ, ಅದನ್ನು ವಾಪಸ್ ಕೊಡಬೇಕೆಂದು, ಸರ್ಕಾರ ಯಾವರೀತಿ ನಿಗದಿಮಾಡಿದೆ ಆರೀತಿ ಹಣವನ್ನು ತೆಗೆದುಕೊಳ್ಳಬೇಕೆಂದು ತಿಳಿಸರಾಗಿದೆ. ಅದಕ್ಕೆ ಸರ್ಕಾರದ ನಿರ್ದೇಶನದ ಪ್ರಕಾರ ಕೆಲಸ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—13 ಜನರಿಂದ 75 ಸಾವಿರ ರೂಪಾಯಿಗಳವರೆಗೂ ತೆಗೆದು ಕೊಂಡಿರುತ್ತಾರೆ. ಅವರು ಹೇಳುತ್ತಾರೆ ಈವತ್ತಿನವರೆಗೂ ಹಣವನ್ನು ವಾಪಸ್ ಕೊಟ್ಟಿಲ್ಲವೆಂದು. ವಾಪಸ್ ಕೊಟ್ಟಿದ್ದರೆ ಯಾವ ತಿಂಗಳಲ್ಲಿ ಹಣವನ್ನು ಕೊಟ್ಟಿದ್ದಾರೆ ಅದನ್ನು ದಯವಿಟ್ಟು ನದನದ ಮುಂದಿಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಗತ್ಯವಾಗಿ ಇಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ರಿಪೋರ್ಟ್ ಪರಿಶೀಲನೆಯಲ್ಲಿದೆ ಎಂದು ತಿಳಿಸಿರುತ್ತೀರಿ, ಪರಿಶೀಲನೆಯಾದಮೇಲೆ ವಿವರವನ್ನು ತಿಳಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರಿಪೋರ್ಟಿಗೂ ಹಣಕ್ಕೂ ಸಂಬಂಧವಿಲ್ಲ. ನಾವು ಹೇಳುವುದೇನೆಂದರೆ 13 ಜನರಿಂದ 35 ಸಾವಿರದಿಂದ 75 ಸಾವಿರದವರೆಗೆ ಹಣವನ್ನು ತೆಗೆದುಕೊಂಡಿದ್ದಾರೆನ್ನತಕ್ಕಂಥ ವಿಷಯ ಸ್ವಲ್ಪ ದಿವಸದ ಹಿಂದೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಅದನ್ನು ತಕ್ಷಣ ವಾಪಸ್ ಕೊಟ್ಟು ಸರ್ಕಾರದವರು ನಿಗದಿಮಾಡಿರತಕ್ಕಂಥ ಹಣವನ್ನು ತೆಗೆದುಕೊಂಡು ವ್ಯವಹಾರ ನಡೆಸಬೇಕೆಂದು ಹೇಳಿ ತಿಳಿಸಿರುತ್ತದೆ. ಅದಕ್ಕೆ ವಾಪಸ್ ಕೊಡುವುದಾಗಿ ಪತ್ರ ಬರೆದಿದ್ದಾರೆ. ಇಂಥಿಂಥವರಿಂದ ವಸೂಲು ಮಾಡಿರುತ್ತಾರೆ. ಇಂಥಿಂಥವರಿಗೆ ಕೊಟ್ಟಿರುತ್ತದೆ ಎನ್ನುವುದರ ಬಗ್ಗೆ ವಿವರಗಳನ್ನು ಸಂಪ್ಹೈತಿ ಮಾಡುವುದರಲ್ಲಿ ಅಭ್ಯಂತರವಿಲ್ಲ.

Steps Taken by Government to overcome hardship due to Power cut

151. SRI T. R. SHAMANNA (Fort). - Will the Minister of State for Information and Power be pleased to state:—

the steys taken by Government to overcome the hardship caused by present power cut to the consumers ?

SRI B. SUBBAYYA SETTY (Minister of State for Information and Power).—

Government has taken the following steps to augment the availablity of energy in order to meet the requirements of the State:—

(*a*) To obtain as much energy as possible from the neighbouring States ;

(*b*) To get clearance to import Gas Turbine Generating Units ;

(*c*) To speed up the Hydro Electric Projects on hand, namely, (1) the Kali Project - I Stage, and (2) Linganamakki Dam Power House ;

(*d*) To get clearance to the following hydel projects :

(i) Varahi
(ii) Bedthi
(iii) Sharavathi Tail Race Scheme
(vi) Kali - II Stage.

(*e*) To get clearance to locate a thermal power station at Mangalore.

ಶ್ರೀ ಟಿ. ಆರ್. ಶಾಮಣ್ಣ.—ಈ ವರ್ಷದಲ್ಲಿ ನಮಗೆ ಬೇಕಾದಷ್ಟು ವಿದ್ಯುಚ್ಛಕ್ತಿ ದೊರೆಯುತ್ತಿಲ್ಲ. ಬಹಳ ಕಡಿಮೆ ಮಾಡಿರುವುದರಿಂದ ರಾಜ್ಯದ ಕೈಗಾರಿಕೆಗಳಲ್ಲಿ ಮತ್ತು ಕಾಮಗಾರಿಗಳಲ್ಲಿ ಕೆಲಸ ಮಾಡತಕ್ಕಂಥವರಿಗೆ ಹೆಚ್ಚಿನ ತೊಂದರೆಯಾಗಿರತಕ್ಕಂಥಾದ್ದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ? ಈ ವರ್ಷದಲ್ಲಿ ಪವರ್ ಕಟ್ ಮಾಡಿರುವುದರಿಂದ ಎಷ್ಟು ಉಳಿತಾಯವಾಯಿತು ಎನ್ನುವುದರ ಬಗ್ಗೆ ಹೇಳುವುದಕ್ಕೆ ಸಾಧ್ಯವೇ ?

† ಶ್ರೀ ಬಿ. ಸುಬ್ಬಯ್ಯ ಶೆಟ್ಟಿ – ಹೆಚ್ಚಿನ ನಷ್ಟವಾಗಿದೆ ಎಂದು ಹೇಳಲು ಸಾಧ್ಯ ಆದರೆ ಎಷ್ಟು ಉಳಿತಾಯವಾಯಿತು ಎಂದು ಹೇಳಲು ಸಾಧ್ಯವಿಲ್ಲ. ಪವರ್ ಉತ್ಪಾದನೆಯಲ್ಲಿ ಖೋತಾ ಇರುವುದರಿಂದ ಪವರ್ ಕಟ್‌ಮಾಡಿರುತ್ತದೆಯಲ್ಲದೆ ಉಳಿತಾಯದ ಪ್ರಶ್ನೆ ಬರುವುದಿಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಈಗ ವಿದ್ಯುಚ್ಛಕ್ತಿಯ ಅಭಾವವನ್ನು ತಪ್ಪಿಸುವುದಕ್ಕೆ ಗ್ಯಾಸ್ ಟರ್ಬನ್ ತರಿಸತಕ್ಕಂಥಾದ್ದು ಮತ್ತು ತರ್ಮಲ್ ಪವರ್ ತರತಕ್ಕಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಇದರ ಬಗ್ಗೆ ವರ್ಷ ವರ್ಷವೂ ಹೇಳುತ್ತಲೇ ಇದ್ದೇವೆ. ವರ್ಷ ವರ್ಷವೂ ಪವರ್ ಕೊರತ ಇರುವುದರಿಂದ ಗ್ಯಾಸ್ ಟರ್ಬನ್ ಮತ್ತು ತರ್ಮಲ್ ಯೂನಿಟ್‌ಗಳನ್ನು ಹಾಕುವ ಕಾರ್ಯಕ್ರಮವನ್ನು ಏನು ತೆಗೆದುಕೊಂಡಿರುತ್ತೀರಿ ಅದು ಯಾವ ಮಟ್ಟದಲ್ಲಿದೆ ತಿಳಿಸುತ್ತೀರಾ ?.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಗ್ಯಾಸ್ ಟರ್ಬನ್ ಬಗ್ಗೆ ಈಗಾಗಲೇ ನಮಗೆ ತಿಳಿದ ಪ್ರಕಾರ ಬಿ ಎಚ್. ಇ ಎರ್ ನಿಂದ ಟೆಂಡರ್ ಕಾರ್ ಮಾಡಿದ್ದೇವೆಂದು ತಿಳಿದುಬಂದಿದೆ ಮತ್ತು ತರ್ಮಲ್ ಯೂನಿಟ್‌ನ್ನು ಸ್ಥಾಪಿಸುವ ಬಗ್ಗೆ ಪ್ರಾಜೆಕ್ಟ್ ರಿಪೋರ್ಟನ್ನು ತಯಾರು ಮಾಡಲು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದೇವೆ. ಅವರ ಉತ್ತರವನ್ನು ಎದುರುನೋಡುತ್ತಿದ್ದೇವೆ.

ಶ್ರೀ ಟಿ. ಆರ್. ಶಾಮಣ್ಣ.—ಈ ವರ್ಷ ಮಳೆ ಬಂದು ನೀರು ಹೆಚ್ಚಿಗೆ ಇರುವುದರಿಂದ ಪವರ್ ಹೆಚ್ಚಿನ ವಿದ್ಯುತ್ತನ್ನು ಉತ್ಪಾದನೆ ಮಾಡಿ ಕೊಡುವ ಸಾಧ್ಯತೆ ಇದೆಯೇ ?.

SRI B. SUBBAYYA SHETTY.—It is too early to reply.

MADAM SPEAKER.—Now Questions are over.